


**ಮಗಳು:** ಅಮ್ಮ 'ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ' ಈ ಗಾದೆ ಅರ್ಥ ಗೊತ್ತಾಯ್ತು.
**ತಾಯಿ:** ಹೇಗೆ ಗೊತ್ತಾಯ್ತು?
**ಮಗಳು:** ಇದು ನಮ್ಮ ಮನೆ ಕಥೆನೇ ಅಮ್ಮಾ, ನಿನಗೆ ಚೆಲ್ಲಾಟ, ಅಪ್ಪನಿಗೆ ಪ್ರಾಣ ಸಂಕಟ.

**ಕೆಲಸದಾಕೆ:** ಅಮ್ಮಾ, ನಿಮ್ಮವರು ನಿಮ್ಮನ್ನು ಏನಂತ ಕರೀತಾರೆ?
**ಮನೆಯಾಕೆ:** ಚಿನ್ನ, ರನ್ನ ಅಂತೆಲ್ಲ ಕರೀತಾರೆ. ಅದ್ಸರಿ, ಈ ಪ್ರಶ್ನೆ ಯಾಕೆ?
**ಕೆಲಸದಾಕೆ:** ಒಂದೊಂದ್ಸಾರಿ, ನೀವಿಲ್ಲದಿರುವಾಗ ನನ್ನನ್ನು ಹಾಗೇ ಕರೀತಾರೆ!

**ಪತಿ:** ನಾನು ಕಾರನ್ನು ಜೋರಾಗಿ ಓಡಿಸ್ತಿರೋದನ್ನು ನೋಡಿ ನಿನಗೆ ಭಯ ಆಗ್ತಾ ಇದೆಯಾ ಪಾರ್ವತಿ?
**ಪಾರ್ವತಿ:** ಅದಕ್ಕೇನು ಭಯ ಇಲ್ಲ ಕಣ್ರಿ, ಆದರೆ, ನೀವಿನ್ನೂ ಇನ್ಸುರೆನ್ಸ್ ಮಾಡಿಸಲಿಲ್ಲವಲ್ಲ. ಅದು ನೆನಪು ಮಾಡಿಕೊಂಡು ಭಯ ಆಯ್ತು.

***

**ಗೌರಿ:** ನೋಡೆ ಕವಿತಾ, ಆ ಲಲಿತ ತನ್ನ ಪ್ರಬಂಧಕ್ಕೆ ಬಹುಮಾನ ಬಂದಿದೆಯಂತ ಬೀಗ್ತಾ ಇದ್ದಾಳೆ.
**ಕವಿತಾ:** ಆಕೆ ಬೀಗಲೇಬೇಕು ಬಿಡಿ!
**ಗೌರಿ:** ಏಕೆ ಹೀಗೆ ಹೇಳ್ತಾ ಇದ್ದೀಯಲ್ಲ?
**ಕವಿತಾ:** ಇನ್ನೇನು ಮತ್ತೆ? ಅವಳ ಲವರ್ ಬರೆದು ಕೊಟ್ಟಿದ್ದಕ್ಕೆ ಬಹುಮಾನ ಬಂತಲ್ಲ ಅದಕ್ಕೆ.

***

**ಕೃಷಿ ಅಧಿಕಾರಿ:** ನಿನ್ನ ಜಮೀನಿನಲ್ಲಿ ಏನು ಬೆಳೆ ಹಾಕುವುದಕ್ಕೆ ಮನಸ್ಸು ಮಾಡಿದ್ದೀಯಾ?
**ರೈತ:** ಯಾವ ಬೆಳೆ ನಾಶ ಆಗುತ್ತೋ ಅದನ್ನು ಹಾಕೋಣ ಅಂತ ಮನಸ್ಸಿದೆ.
**ಕೃಷಿ ಅಧಿಕಾರಿ:** ನಾಶವಾಗೋ ಬೆಳೆನೇ ಏಕೆ?
**ರೈತ:** ನಾವೇನು ಬೆಳೆದ್ರು ಅಷ್ಟಕ್ಕಷ್ಟೆ, ನಾಶ ಆಗೋ ಬೆಳೆಯಾದ್ರೆ ಪರಿಹಾರವಾದ್ರೂ ಸಿಗುತ್ತಲ್ಲ!

***

**ಮಹಿಳೆ:** ಡಾಕ್ಟರೇ, ನೀವು ನನ್ನನ್ನು ಪರೀಕ್ಷಿಸುವಾಗ ನಿಮ್ಮ ನರ್ಸ್ ಅನ್ನು ಒಳಗೆ ಕರೆಯಿರಿ.
**ಡಾಕ್ಟರ್:** ಏಕಮ್ಮಾ ನನ್ನ ಮೇಲೆ ನಂಬಿಕೆ ಇಲ್ಲವೇ?
**ಮಹಿಳೆ:** ನಿಮ್ಮ ಮೇಲೆ ನಂಬಿಕೆ ಇದೆ, ಆದರೆ ಹೊರಗೆ ನಮ್ಮವರು ಇದ್ದಾರಲ್ಲ.

***

**ಸುರೇಶ:** ಚಂದ್ರು ಮೆದುಳಿಲ್ಲದೆ ಎಷ್ಟು ವರ್ಷಗಳು ಬದುಕಿರಬಹುದು?
**ಚಂದ್ರು:** ಬಹಳ ವರ್ಷಗಳು ಬದುಕಿರಬಹುದು.
**ಸುರೇಶ:** ಅದನ್ನು ಹೇಗೆ ಹೇಳ್ತಿಯೆ?
**ಚಂದ್ರು:** ನೀನು ಇನ್ನೂ ಬದುಕಿಲ್ಲವೆ.

***

**ಪತಿ:** ಮದುವೆಯಲ್ಲಿ ಕುದುರೆಗೆ ಬದಲಾಗಿ ಕತ್ತೆ ಸವಾರಿ ಮಾಡಿಸಬಹುದಲ್ಲ?
**ಪತ್ನಿ:** ಮಾಡಿಸಬಹುದು, ಆದರೆ ಮದುವೆ ಹೆಣ್ಣು ಒಂದೇ ಬಾರಿ ಎರಡು ಕತ್ತೆಗಳನ್ನು ನೋಡಿ ಹೆದರದಿರಲಿ ಅಂತ.

***

**ಪಂಕಜಮ್ಮ:** ಏನ್ರಿ ಪುಟ್ಟಮ್ಮ, ನಿಮ್ಮವರಿಗೆ ಕಿವಿ ಆಪರೇಷನ್ ಮಾಡಿಸಬೇಕು ಅಂತಿದ್ದೀರಲ್ಲ ಆಯ್ತಾ?
**ಪುಟ್ಟಮ್ಮ:** ಈಗ ಬೇಡ ಅಂತಿದ್ದಾರೆ.
**ಪಂಕಜಮ್ಮ:** ಏಕಂತೆ?
**ಪುಟ್ಟಮ್ಮ:** ನಿನ್ನ ಸಂಗೀತಾಭ್ಯಾಸವೆಲ್ಲ ಮುಗಿಯಲಿ ಅಂತಿದ್ದಾರೆ.

***

**ಸಂಗೀತಗಾರ:** ಶಾಸ್ತ್ರೀಯ ಸಂಗೀತಕ್ಕೂ ಪಾಪ್ ಸಂಗೀತಕ್ಕೂ ಇರುವ ವ್ಯತ್ಯಾಸವೇನು?




**ಅಭ್ಯರ್ಥಿ:** ಶಾಸ್ತ್ರೀಯ ಸಂಗೀತ ಕೇಳುವಾಗ ಜನ ತಲೆ ಅಲ್ಲಾಡಿಸುತ್ತಾರೆ, ಪಾಪ್ ಸಂಗೀತ ಕೇಳುವಾಗ ಜನ ಕಾಲು ಅಲ್ಲಾಡಿಸುತ್ತಾರೆ!

***

**ನಾರಾಯಣ:** ಹೇಮಂತ, ಒಂದು ವೇಳೆ ಹೆಂಡತಿ ಅಥವಾ ಪ್ರಿಯತಮೆಯಿಂದ ಬೈಗುಳ ತಿನ್ನುವ ಪ್ರಮೇಯ ಎದುರಾದರೆ ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತೀಯಾ?
**ಹೇಮಂತ:** ಹೆಂಡತಿ ಕೈಯಿಂದ.
**ನಾರಾಯಣ:** ಅದೇನು ಹೆಂಡತಿ ಅಂತ ಹೇಳ್ತಾ ಇದ್ದೀಯಲ್ಲ?
**ಹೇಮಂತ:** ಇನ್ನೇನು ಮತ್ತೆ, ಹೆಂಡತಿ ಮನೆಯೊಳಗೆ ಬೈಯ್ಯುತ್ತಾಳೆ. ಆದರೆ ಪ್ರಿಯತಮೆ ನಡು ರಸ್ತೆಯಲ್ಲಿಯೇ ಶುರು ಮಾಡ್ಕೋತಾಳೆ.

***

**ಪತಿ:** ಏನೇ ಅಕಸ್ಮಾತ್ ನಾನು ಸತ್ತರೆ ಮೊದಲು ಯಾರಿಗೆ ತಿಳಿಸುತ್ತೀಯಾ?
**ಪತ್ನಿ:** ವಿಮಾ ಕಂಪನಿಗೆ.

***

**ಶಿಕ್ಷಕ:** ಚಂದ್ರು ನೀನು ತಂದೆಗೆ ಹೆದರುತ್ತೀಯೋ, ತಾಯಿಗೋ?
**ಚಂದ್ರು:** ತಾಯಿಗೆ ಸಾರ್!
**ಶಿಕ್ಷಕ:** ಹಾಗಾದರೆ ತಂದೆಗೆ ಹೆದರೋದೇ ಇಲ್ಲವೇ?
**ಚಂದ್ರು:** ಇಲ್ಲ ಸಾರ್, ನಮ್ಮ ತಂದೆಯೇ, ತಾಯಿಗೆ ಹೆದರುತ್ತಾರೆ ಸಾರ್!

***

**ವೀರಪ್ಪ:** ನಾಣಿ ನೀನು ನೃತ್ಯ ಕಲಿತವಳನ್ನು ಮದುವೆಯಾದೆಯಲ್ಲ. ಈಗ ಅವಳೇನು ಮಾಡ್ತಾ ಇದ್ದಾಳೆ?
**ನಾಣಿ:** ಸಧ್ಯಕ್ಕೆ ಈಗ ಅವಳು ನನ್ನನ್ನೇ ಕುಣಿಸುತ್ತಾ ಇದ್ದಾಳೆ!

—ಶಂಕರೇಗೌಡ ತುಂಬಕೆರೆ,
ಮಂಡ್ಯ